KA / BG-GPO/2515/WPP-47/2009-2011

# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**


| ಸಂಪುಟ ೧೪೬ | ಬೆಂಗಳೂರು, ಗುರುವಾರ, ಜನವರಿ ೬, ೨೦೧೧ (ಪುಷ್ಯ ೧೬ ಶಕ ವರ್ಷ ೧೯೩೨) | ಸಂಚಿಕೆ ೧ |
|---|---|---|


## ಭಾಗ–೬

## ಬೆಂಗಳೂರು ವಿಭಾಗಕ್ಕೆ ಮತ್ತು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ತುಮಕೂರು, ಚಿತ್ರದುರ್ಗ, ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ಸ್ಥಳೀಯವಾಗಿ ಅನ್ವಯವಾಗುವ ಅಧಿಸೂಚನೆಗಳು ಮತ್ತು ಆದೇಶಗಳು.

**ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಂಗಳೂರು ಜಿಲ್ಲೆ, ಬೆಂಗಳೂರು**

**ಅಂತಿಮ ಅಧಿಸೂಚನೆ**

**ಸಂಖ್ಯೆ: ಕೆ.ಎಸ್.ಎ:ಸಿಆರ್:19/05–06, ದಿನಾಂಕ:22ನೇ ಡಿಸೆಂಬರ್, 2010**

ಈ ಕಛೇರಿಯ ನಂ.ಕೆ.ಎಸ್.ಎ:ಸಿಆರ್:19/2005–06, ದಿನಾಂಕ:29.04.2009ರ ಪ್ರಿಲಿಮಿನರಿ ಅಧಿಸೂಚನೆಯನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿ ಅದರಲ್ಲಿ ಸದರಿ ಅಧಿಸೂಚನೆಯ ಷೆಡ್ಯೂಲ್‌ನಲ್ಲಿರುವ ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ನಾಯಂಡಹಳ್ಳಿ ಗ್ರಾಮದ ಸರ್ವೆ ನಂ.63/2 ರಲ್ಲಿ 0–20 ಗುಂಟೆ ವಿಸ್ತೀರ್ಣದಲ್ಲಿ ವಿನಾಯಕನಗರ ಕಾಲೋನಿ ಕೊಳಚೆ ಪ್ರದೇಶವನ್ನು ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನೆ) ಕಾಯ್ದೆ 1973ರ ಸೆಕ್ಷನ್ 3ರಡಿಯಲ್ಲಿ ಪ್ರಾರಂಭಿಕವಾಗಿ ಕೊಳಚೆ ಪ್ರದೇಶವೆಂದು ಘೋಷಿಸಿ ಸಂಬಂಧಿಸಿದವರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿತ್ತು.

ಅಧ್ಯಕ್ಷರು, ಐ.ಟಿ.ಐ. ಎಂಪ್ಲಾಯೀಸ್ ಹೌಸ್ ಬಿಲ್ಡಿಂಗ್ ಕೋ–ಆಪರೇಟಿವ್ ಸೊಸೈಟಿ ಲಿ., ದೂರವಾಣಿನಗರ, ಬೆಂಗಳೂರು–560016, ಶ್ರೀ ಮಣಿಚೆಟ್ಟಿ, ಶ್ರೀಮತಿ ಗೀತಾಮಣಿ ಮತ್ತು ಶ್ರೀ ಅಪ್ಪಯ್ಯ ಬಿನ್ ಮುನಿಸ್ವಾಮಪ್ಪ ಈ ಎಲ್ಲರೂ ನಂ.37/l, 4ನೇ ಕ್ರಾಸ್, ನಾಗಪ್ಪ ಬ್ಲಾಕ್, ಶ್ರೀರಾಂಪುರ, ಬೆಂಗಳೂರು–560021 ಇವರುಗಳು ಈ ಕಛೇರಿಯಿಂದ ದಿನಾಂಕ:29.04.2009ರಂದು ಹೊರಡಿಸಿದ ಪ್ರಿಲಿಮಿನರಿ ಅಧಿಸೂಚನೆಗೆ ಆಕ್ಷೇಪಣೆ ಸಲ್ಲಿಸಿ, ಘೋಷಿತ ಪ್ರದೇಶವು ತಮ್ಮ ಹಕ್ಕುದಾರಿಕೆ ಮತ್ತು ಸ್ವಾಧೀನದಲ್ಲಿದ್ದು, ಸದರಿ ಪ್ರದೇಶವನ್ನು ಕೊಳಚೆ ಪ್ರದೇಶವೆಂದು ಘೋಷಿಸಬಾರದಾಗಿ ನಿವೇದಿಸಿಕೊಂಡಿರುತ್ತಾರೆ. ಸದರಿ ಪ್ರಕರಣವನ್ನು ಜಿಲ್ಲಾಧಿಕಾರಿಗಳವರ ನ್ಯಾಯಾಲಯದಲ್ಲಿ ನ್ಯಾಯಾಲಯದ ಪ್ರಕರಣವನ್ನಾಗಿ ಕೈಕೊಂಡು, ಉಭಯಪಾರ್ಟಿಗಳಿಗೂ ವಿಚಾರಣೆಗೆ ಹಾಜರಾಗುವಂತೆ ನೋಟೀಸು ನೀಡಲಾಗಿತ್ತು. ಉಭಯ ಪಾರ್ಟಿಗಳಿಗೆ ಸಾಕಷ್ಟು ಕಾಲಾವಕಾಶ ನೀಡಿ, ವಿಚಾರಣೆ ನಡೆಸಿ, ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಇವರ ಆದೇಶ ನಂ.ಕೆ.ಎಸ್.ಎ.ಸಿಆರ್:19/05–06, ದಿನಾಂಕ:21.12.2010 ರಲ್ಲಿ ಈ ಕೆಳಗಿನಂತೆ ಆದೇಶವನ್ನು ಹೊರಡಿಸಿರುತ್ತಾರೆ.

ಅ) ಪ್ರಾರಂಭಿಕವಾಗಿ ಘೋಷಿತವಾದ ಕೊಳಚೆ ಪ್ರದೇಶದ ಬಗ್ಗೆ ಅದನ್ನು ಅಂತಿಮವಾಗಿ ಘೋಷಿಸಬಾರದೆಂದು ಆಕ್ಷೇಪಣೆ ಸಲ್ಲಿಸಿರುವ ಪ್ರತಿವಾದಿಗಳು ನಾಯಂಡಹಳ್ಳಿ ಗ್ರಾಮದ ಸರ್ವೆ ನಂ.63/2ರಲ್ಲಿ ತಮಗೆ ಐ.ಟಿ.ಐ. ಎಂಪ್ಲಾಯೀಸ್ ಹೌಸ್ ಬಿಲ್ಡಿಂಗ್ ಕೋ–ಆಪರೇಟಿವ್ ಸೊಸೈಟಿ ಲಿ., ವತಿಯಿಂದ ಮಂಜೂರಾಗಿದೆ ಎಂದು ಹೇಳಲಾದ ನಿವೇಶನಗಳನ್ನು ತಾವು ಭೌತಿಕವಾಗಿ ಸ್ವಾಧೀನತೆ ಹೊಂದಿರುವುದನ್ನು ಸಾಬೀತುಪಡಿಸಲು ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಅಲ್ಲದೇ ಸಿವಿಲ್ ಜಡ್ಜ್ ನ್ಯಾಯಾಲಯದ ಓಎಸ್.ನಂ.1366/2006 ದಿನಾಂಕ:02.08.2010ರಲ್ಲಿ ನೀಡಿರುವ ತನ್ನ ಆದೇಶದಲ್ಲಿ ಸದರಿ ಪ್ರದೇಶವನ್ನು ಕೊಳಚೆ ಪ್ರದೇಶವೆಂದು ಕಲಂ 3ರಡಿ ಘೋಷಣೆ ಮಾಡುವ ಬಗ್ಗೆ ಯಾವುದೇ ಅಡಚಣೆಯಿಲ್ಲವೆಂದು ತಿಳಿಸಿರುತ್ತಾರೆ.

ಆ) ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ವತಿಯಿಂದ ಹಾಜರಾದ ವಕೀಲರು ಈ ಪ್ರದೇಶದಲ್ಲಿ ಬಹಳ ವರ್ಷಗಳ ಹಿಂದಿನಿಂದಲೂ 114 ಕುಟುಂಬಗಳು ಅನಾರೋಗ್ಯಕರ ವಾತಾವರಣದಲ್ಲಿ ವಾಸಿಸುತ್ತಿದ್ದು, ಪ್ರತಿವಾದಿಗಳು ಆ ಲಾಗಾಯ್ತು ತಮ್ಮ ಹಕ್ಕುದಾರಿಕೆಯನ್ನು ಸಾಬೀತುಪಡಿಸಿಕೊಂಡು ತಮ್ಮ ನಿವೇಶನಗಳ ಸ್ವಾಧೀನಾನುಭವವನ್ನು ಭೌತಿಕವಾಗಿ ಹೊಂದದೇ ಇರುವುದರಿಂದ ಈ ಹಂತದಲ್ಲಿ ಆಕ್ಷೇಪಣೆ ಮಾಡುವುದು ಸಮಂಜಸವಲ್ಲವೆಂದು ತಿಳಿಸಿರುತ್ತಾರೆ.

ಇ) ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನೆ) ಕಾಯ್ದೆ 1973ರ ಕಲಂ 28ರಡಿ ಕರ್ನಾಟಕ ಕೊಳಚೆ ನಿರ್ಮೂಲನೆ ಮಂಡಳಿಯ ಆದ್ಯ ಕರ್ತವ್ಯವು, ಈ ಪ್ರದೇಶದಲ್ಲಿನ ನಿವಾಸಿಗಳನ್ನು ಒಕ್ಕಲೆಬ್ಬಿಸದಂತೆ ತಡೆಹಿಡಿಯುವುದಾಗಿರುತ್ತದೆ. ಏಕೆಂದರೆ ಹೌಸ್ ಬಿಲ್ಡಿಂಗ್ ಕೋ–ಆಪರೇಟಿವ್ ಸೊಸೈಟಿಯವರು ಭೂಸ್ವಾಧೀನಪಡಿಸಿಕೊಂಡು ಹಂಚಿಕೆ ಮಾಡಿದ ಉದ್ದೇಶ ಈ ಪ್ರಕರಣದಲ್ಲಿ ನಿರರ್ಥಕವಾಗಿದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಸದರಿ ಕೊಳಚೆ ಪ್ರದೇಶವನ್ನು ಕರ್ನಾಟಕ ಕೊಳಚೆ ಪ್ರದೇಶ (ಅಭಿವೃದ್ಧಿ ಮತ್ತು ನಿರ್ಮೂಲನೆ) ಕಾಯ್ದೆ 1973ರ ಕಲಂ 3ರಡಿಯಲ್ಲಿ ಅಂತಿಮವಾಗಿ "ಕೊಳಚೆ ಪ್ರದೇಶ" ವೆಂದು ಘೋಷಿಸುವ ಬಗ್ಗೆ ಆದೇಶವಾಗಿರುತ್ತದೆ.

ಪ್ರಶ್ನಿತ ಕೊಳಚೆ ಪ್ರದೇಶದಲ್ಲಿ ಗುಡಿಸಲು / ಮನೆಗಳು ದುರಸ್ತಿ ಇಲ್ಲದೇ ಕುಡಿಯುವ ನೀರು, ದೀಪ, ರಸ್ತೆ, ಚರಂಡಿ ಇತ್ಯಾದಿ ಮೂಲಭೂತ ಸೌಕರ್ಯಗಳಿಲ್ಲದೇ ಅನಾರೋಗ್ಯದ ವಾತಾವರಣ ಉಂಟಾಗಿರುತ್ತದೆ. ಸದರಿ ಪ್ರದೇಶವನ್ನು ಅಭಿವೃದ್ಧಿಪಡಿಸುವುದು ಅತ್ಯಗತ್ಯವಾಗಿರುತ್ತದೆ. ಆದ್ದರಿಂದ ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನೆ) ಕಾಯ್ದೆ 1973ರ ಸೆಕ್ಷನ್ 3 ರಡಿಯಲ್ಲಿ ದತ್ತವಾಗಿರುವ ಅಧಿಕಾರದಂತೆ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಪ್ರದೇಶವನ್ನು ಮೇಲ್ಕಂಡ ಕಾಯ್ದೆಯ ಸೆಕ್ಷನ್ 3 ರಡಿಯಲ್ಲಿ "ಅಂತಿಮವಾಗಿ" ಕೊಳಚೆ ಪ್ರದೇಶವೆಂದು ಘೋಷಿಸಿರುತ್ತೇನೆ.

**ಷೆಡ್ಯೂಲ್**

ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ನಾಯಂಡಹಳ್ಳಿ ಗ್ರಾಮದ ವಿನಾಯಕನಗರ ಕೊಳಚೆ ಪ್ರದೇಶ ಚಕ್ಕುಬಂದಿ ಹಾಗೂ ಹದ್ದುಬಸ್ತು ತಃಖ್ತೆ.

| ಕ್ರ ಸಂ. | ಕೊಳಚೆ ಪ್ರದೇಶದ ಹೆಸರು ಮತ್ತು ಸ್ಥಳ | ಕೊಳಚೆ ಪ್ರದೇಶದಲ್ಲಿರುವ ಜಮೀನಿನ ಮಾಲೀಕರ ಹೆಸರು | ಸರ್ವೆ ನಂ. | ವಿಸ್ತೀರ್ಣ ಎಕರೆ/ ಗುಂಟೆ | ಚೆಕ್ಕುಬಂದಿಗಳು | | | |
|---|---|---|---|---|---|---|---|---|
| | | | | | ಪೂರ್ವ | ಪಶ್ಚಿಮ | ಉತ್ತರ | ದಕ್ಷಿಣ |
| 1. | ವಿನಾಯಕನಗರ ಕೊಳಚೆ ಪ್ರದೇಶ, ನಾಯಂಡನಹಳ್ಳಿ ಗ್ರಾಮ, ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು. | ಐ.ಟಿ.ಐ. ಎಂಪ್ಲಾಯೀಸ್ ಗೃಹ ನಿರ್ಮಾಣ ಸಹಕಾರ ಸಂಘ | 63/2 | 0–20 | ರಸ್ತೆ | ಖಾಲಿ ಪ್ರದೇಶ | ಖಾಲಿ ನಿವೇಶನಗಳು | ಖಾಸಗಿ ಮನೆಗಳು |

**ಎಂ.ಕೆ. ಅಯ್ಯಪ್ಪ**
ಜಿಲ್ಲಾಧಿಕಾರಿಗಳು,
ಬೆಂಗಳೂರು ಜಿಲ್ಲೆ, ಬೆಂಗಳೂರು.

ಪಿ.ಆರ್.467

## ಜಿಲ್ಲಾಧಿಕಾರಿಗಳ ಕಾರ್ಯಾಲಯ, ತುಮಕೂರು ಜಿಲ್ಲೆ, ತುಮಕೂರು

## ರದ್ದಿಯಾತಿ ಅಧಿಸೂಚನೆ

**ಪ್ರಕರಣದ ಸಂಖ್ಯೆ: ಎಲ್‌ಎಕ್ಯೂ:ಎಸ್‌ಆರ್/26/2010–11, ದಿನಾಂಕ:2ನೇ ಡಿಸೆಂಬರ್, 2010**

ಭೂ ಸ್ವಾಧೀನ ಕಾಯಿದೆ 1894 (ಸೆಂಟ್ರಲ್ ಕಾಯಿದೆ 1894) ರಂತೆ ವಿಧಿ 4(1)ರ ಅಧಿಸೂಚನೆ ಸಂಖ್ಯೆ: ಎಲ್‌ಎಕ್ಯೂ:ಎಸ್‌ಆರ್:47/09–10, ದಿನಾಂಕ:19.11.2009 ರಂತೆ ಜಿಲ್ಲಾಧಿಕಾರಿಗಳು, ತುಮಕೂರು ಇವರಿಂದ ಅನುಮೋದಿಸಿದ್ದು, ಸದರಿ ಅಧಿಸೂಚನೆಯು ದಿನಾಂಕ:14.01.2010ರ ಕರ್ನಾಟಕ ರಾಜ್ಯಪತ್ರದ ಪುಟ 35 ರಿಂದ 45 ರವರೆಗೆ ಭಾಗ–6ರಲ್ಲಿ 1. ಚಿಕ್ಕಯಡಿಯೂರು, 2. ನಾಗೇಗೌಡನ ಬ್ಯಾಲ, 3. ಶೆಟ್ಟಿಗೊಂಡನಹಳ್ಳಿ, 4. ಮಲ್ಲೂರು ಗ್ರಾಮದ ಜಮೀನು ಹೇಮಾವತಿ ನಾಲಾ ಯೋಜನೆಗೆ ಭೂಸ್ವಾಧೀನ ಪಡಿಸಲು ಪ್ರಕಟಣೆ ಹೊರಡಿಸಿರುತ್ತದೆ. ಆದರೆ ಈ ಗ್ರಾಮಗಳ ಬಾಬ್ತು ಜಂಟಿ ಮೋಜಣಿ ಕಾರ್ಯ ಪೂರೈಸಿದಾಗ ಈ ಕೆಳಕಂಡ ಅನುಸೂಚಿಯಲ್ಲಿ ನಮೂದಿಸಿರುವ ಸರ್ವೆ ನಂಬರ್ ಗಳ ಬಾಬ್ತು ಕಲಂ 4(1)ರಂತೆ ಪ್ರಕಟಿಸಲಾದ ವಿಸ್ತೀರ್ಣಕ್ಕಿಂತ ಕಡಿಮೆ ವಿಸ್ತೀರ್ಣ ಭೂಸ್ವಾಧೀನಕ್ಕೆ ಒಳಪಡುವುದೆಂದು ಕಂಡುಬಂದಿರುವುದರಿಂದ ಕಲಂ 4(1)ರಲ್ಲಿ ಹೆಚ್ಚುವರಿಯಾಗಿ ಪ್ರಕಟವಾಗಿದ್ದು ವಿಸ್ತೀರ್ಣವನ್ನು ರದ್ದುಪಡಿಸಲು ರದ್ದಿಯಾತಿ ಅಧಿಸೂಚನೆ ಹೊರಡಿಸಿರುವುದಾಗಿ ಈ ಮೂಲಕ ಪ್ರಕಟಿಸಲಾಗಿದೆ.

**ಅನುಸೂಚನೆ**

**ಜಿಲ್ಲೆ: ತುಮಕೂರು ಹೋಬಳಿ: ಮಾಯಸಂದ್ರ ತಾಲ್ಲೂಕು: ತುರುವೇಕೆರೆ ಗ್ರಾಮ: 1. ಮಲ್ಲೂರು**

| ಕ್ರ. ಸಂ. | 4(1)ರ ಕ್ರ.ಸಂ. | ಹಿಡುವಳಿದಾರರ ಹೆಸರುಗಳು | ಸ.ನಂ | ಭೂಸ್ವಾಧೀನಕ್ಕೊಳಪಡದ ಕಡಿಮೆಯಾದ ವಿಸ್ತೀರ್ಣ | ಷರಾ |
|---|---|---|---|---|---|
| 1. | 44 | ನಿಂಗಮ್ಮ ಕೋಂ ತಿಮ್ಮೇಗೌಡ, ಟಿ.ರಾಜಣ್ಣ ಬಿನ್ ತಿಮ್ಮೇಗೌಡ, ಟಿ.ರಂಗಯ್ಯ ಬಿನ್ ತಿಮ್ಮೇಗೌಡ, ತಿಮ್ಮೇಗೌಡ ಬಿನ್ ಸಂಜೀವೇಗೌಡ, ಹೆಚ್.ಕೆ. ನಾರಾಯಣಪ್ಪ ಬಿನ್ ಕೃಷ್ಣಪ್ಪ, ರಮೇಶ್ ಬಿನ್ ತಿಮ್ಮೇಗೌಡ, ದೇವರಾಜು ಬಿನ್ ರಂಗಾಚಾರ್ | 79 | 4–12 | ಕಮ್ಮಿಯಾಗಿದೆ |
| | | **ಒಟ್ಟು** | | **4–12** | |

ಜಿಲ್ಲಾಧಿಕಾರಿಗಳು,
ತುಮಕೂರು ಜಿಲ್ಲೆ, ತುಮಕೂರು.

ಪಿ.ಆರ್.463

**ಕಂದಾಯ ಸಚಿವಾಲಯ, ಬೆಂಗಳೂರು**

**ಭೂಸ್ವಾಧೀನ ಅಧಿನಿಯಮ 6(1)ನೇ ಪ್ರಕರಣದ ಮೇರೆಗೆ ಘೋಷಣೆ**

**ಕ್ರಮಾಂಕ: ಕಂಇ08 ಭೂಸ್ವಾತು 2010, ದಿನಾಂಕ:27ನೇ ಸೆಪ್ಟೆಂಬರ್, 2010**

ಇದರ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಭೂಮಿಗಳು ಒಂದು ಸಾರ್ವಜನಿಕ ಉದ್ದೇಶಕ್ಕಾಗಿ ಎಂದರೆ ನ್ಯಾಯಾಲಯದ ಕಾಂಪೌಂಡ್ ಮತ್ತು ರಸ್ತೆಗಾಗಿ, ಅಗತ್ಯವಾಗಿದ್ದವು ಎಂದು ತುಮಕೂರು ಜಿಲ್ಲೆಯ ಜಿಲ್ಲಾಧಿಕಾರಿಯವರು ಭೂಸ್ವಾಧೀನ ಕಾಯ್ದೆ 1894ರ ಕಲಂ 4(1)ರ ಮೇರೆಗೆ ಅಧಿಸೂಚನೆ ಕ್ರಮಾಂಕ:ಎಲ್ಎಕ್ಯೂ:ಎಸ್ಆರ್:11/09-10, ದಿನಾಂಕ:22.06.2009ರ ಅಧಿಸೂಚನೆಯಲ್ಲಿ ಅಧಿಸೂಚಿಸಲಾಗಿದ್ದುದರಿಂದ ಮತ್ತು ಕರ್ನಾಟಕ ಕಾಯ್ದೆ 33:1991 ರನ್ವಯ ತಿದ್ದುಪಡಿಯಾದ ಭೂಅರ್ಜನೆ ಅಧಿನಿಯಮ 1894ರ (ಕೇಂದ್ರ ಅಧಿನಿಯಮ 1894ರ (1)5ಎ ಪ್ರಕರಣದ (2)ನೇ ಉಪ ಪ್ರಕರಣದ ಮತ್ತು 6(1ಎ) ಪ್ರಕರಣದ ಮೇರೆಗೆ ಜಿಲ್ಲಾಧಿಕಾರಿಯವರು ನೀಡಿರುವ ವರದಿಯನ್ನು ಪರಿಶೀಲಿಸಿದ ನಂತರ ಮೇಲೆ ನಿರ್ದಿಷ್ಟಪಡಿಸಿದ ಉದ್ದೇಶಕ್ಕಾಗಿ ಸದರಿ ಭೂಮಿಗಳನ್ನು ಅರ್ಜನೆ ಮಾಡಿಕೊಳ್ಳುವ ಅಗತ್ಯವಿದೆ ಎಂದು ಕರ್ನಾಟಕ ಸರ್ಕಾರಕ್ಕೆ ಮನದಟ್ಟಾಗಿರುವುದರಿಂದ, ಮೇಲೆ ತಿಳಿಸಿದ ಉದ್ದೇಶಕ್ಕಾಗಿ ಭೂಮಿಗಳು ಅಗತ್ಯವಾಗಿದೆ ಎಂದು ಸದರಿ ಅಧಿನಿಯಮದ 6ನೇ ಪ್ರಕರಣದ ಮೇರೆಗೆ ಈ ಮೂಲಕ ಘೋಷಿಸಲಾಗಿದೆ.

ಉಪ ವಿಭಾಗಾಧಿಕಾರಿಗಳು ಹಾಗೂ ಭೂಸ್ವಾಧೀನಾಧಿಕಾರಿಗಳು, ಮಧುಗಿರಿ ಉಪವಿಭಾಗ, ಮಧುಗಿರಿ ಇವರನ್ನು ಸದರಿ ಭೂಮಿಗಳಿಗೆ ಸಂಬಂಧಿಸಿದಂತೆ ಇನ್ನು ಮುಂದೆ ಕೈಗೊಳ್ಳುವ ಎಲ್ಲಾ ವ್ಯವಹಾರಗಳ ಕುರಿತಂತೆ ಜಿಲ್ಲಾಧಿಕಾರಿಯವರ ಪ್ರಕಾರ್ಯಗಳನ್ನು ನಿರ್ವಹಿಸುವ ಸಲುವಾಗಿ ಸದರಿ ಭೂಅರ್ಜನೆ ಅಧಿನಿಯಮದ 3ನೇ ಪ್ರಕರಣದ (ಸಿ) ಖಂಡದ ಮೇರೆಗೆ ಈ ಮೂಲಕ ನೇಮಕ ಮಾಡಲಾಗಿದೆ ಹಾಗೂ ಸದರಿ ಭೂಮಿಯ ಅರ್ಜನೆಗೆ ಸಂಬಂಧಿಸಿದ ಆದೇಶವನ್ನು ಪಡೆದುಕೊಳ್ಳಲು ಸದರಿ ಅಧಿನಿಯಮದ 7ನೇ ಪ್ರಕರಣದ ಮೇರೆಗೆ ನಿರ್ದೇಶನ ನೀಡಲಾಗಿದೆ.

ಸದರಿ ಭೂಮಿಗಳ ನಕಾಶೆಯನ್ನು ಪರಿವೀಕ್ಷಣೆಗಾಗಿ ಉಪ ವಿಭಾಗಾಧಿಕಾರಿಗಳು ಹಾಗೂ ಭೂಸ್ವಾಧೀನಾಧಿಕಾರಿಗಳು, ಮಧುಗಿರಿ ಉಪವಿಭಾಗ, ಮಧುಗಿರಿರವರ ಕಛೇರಿಯಲ್ಲಿ ಇಡಲಾಗಿದೆ.

**ಅನುಸೂಚಿ**

**ಜಿಲ್ಲೆ: ತುಮಕೂರು** **ತಾಲ್ಲೂಕು: ಕೊರಟಗೆರೆ** **ಹೋಬಳಿ: ಕಸಬಾ** **ಗ್ರಾಮ: ಮೂಡ್ಲಪಣ್ಣೆ**

| ಕ್ರ. ಸಂ. | ಖಾತೆದಾರರ ಹೆಸರು | ಅನುಭವದಾರರ ಹೆಸರು | ಸ.ನಂ. | ತರಹೆ | ವಿಸ್ತೀರ್ಣ ಎ.ಗುಂ. | ಆಕಾರ ರೂ.ಪೈ. | ಚಕ್ಕುಬಂದಿ | | | |
|---|---|---|---|---|---|---|---|---|---|---|
| | | | | | | | ಉತ್ತರ | ದಕ್ಷಿಣ | ಪೂರ್ವ | ಪಶ್ಚಿಮ |
| 1 | 2 | 3 | 4 | 5 | 6 | 7 | 8ಎ | 8ಬಿ | 8ಸಿ | 8ಡಿ |
| 1. | ಶಾರದಮ್ಮ ಕೋಂ ಹನುಮಯ್ಯ ಪ್ರಸನ್ನಕುಮಾರ್ ಬಿನ್ ಲಕ್ಷ್ಮಯ್ಯ | ಶಾರದಮ್ಮ, ಪ್ರಸನ್ನಕುಮಾರ್ | 40/1ಬಿ1 | ಭೂ ಪರಿವರ್ತನೆ (ನಿವೇಶನ) | 0.15.60 | 0–39 | ರಿ.ಸ.ನಂ.40/1ಬಿ1 ರ ಉಳಿಕೆ | ಇದೇ ಸ.ನಂ.ನ ಉಳಿಕೆ ಜಮೀನು | ಮಧುಗಿರಿ ರಸ್ತೆ | ರಿ.ಸ.ನಂ.151ರ ಜಮೀನು |
| 2. | ಕೆ.ಎನ್. ನರಸಿಂಹಮೂರ್ತಿ ಬಿನ್ ನರಸಪ್ಪ | ಕೆ.ಎನ್. ನರಸಿಂಹಮೂರ್ತಿ | 40/1ಬಿ1 ಖಾ.ನಂ. 2957 2958 | ಭೂ ಪರಿವರ್ತನೆ (ನಿವೇಶನ) | 0.02.20 | 0–05 | ರಿ.ಸ.ನಂ. 40/1ಬಿ1ರ ಉಳಿಕೆ | ರಿ.ಸ.ನಂ.40/1ಬಿ1 ರ ಉಳಿಕೆ | ರಿ.ಸ.ನಂ.40/1ಬಿ1ರ ಉಳಿಕೆ | ರಿ.ಸ.ನಂ.40/1ಬಿ1ರ ಉಳಿಕೆ |
| 3. | ಶಾರದಮ್ಮ ಕೋಂ ಹನುಮಯ್ಯ, ಪ್ರಸನ್ನಕುಮಾರ್ ಬಿನ್ ಲಕ್ಷ್ಮಯ್ಯ | ಶಾರದಮ್ಮ ಪ್ರಸನ್ನಕುಮಾರ್ | 40/1ಬಿ1 | ಭೂ ಪರಿವರ್ತನೆ (ನಿವೇಶನ) | 0.001/2 | 0.01 | ರಿ.ಸ.ನಂ.40/1ಬಿ1 ರ ಭೂಸ್ವಾಧೀನ ವಾಗುವ ಪ್ರದೇಶ | ರಿ.ಸ.ನಂ.40/1ಬಿ1 ರ ಉಳಿಕೆ | ರಿ.ಸ.ನಂ.40/1ಬಿ1ರ ಉಳಿಕೆ | ರಿ.ಸ.ನಂ.40/1ಬಿ1ರ ಉಳಿಕೆ |

| ಕ್ರ. ಸಂ. | ಖಾತೆದಾರರ ಹೆಸರು | ಅನುಭವದಾರರ ಹೆಸರು | ಸ.ನಂ. | ತರಹೆ | ವಿಸ್ತೀರ್ಣ ಎ.ಗುಂ. | ಆಕಾರ ರೂ.ಪೈ. | ಚಕ್ಕುಬಂದಿ | | | |
|---|---|---|---|---|---|---|---|---|---|---|
| | | | | | | | ಉತ್ತರ | ದಕ್ಷಿಣ | ಪೂರ್ವ | ಪಶ್ಚಿಮ |
| 1 | 2 | 3 | 4 | 5 | 6 | 7 | 8ಎ | 8ಬಿ | 8ಸಿ | 8ಡಿ |
| 4. | ಲಕ್ಷ್ಮೀದೇವಮ್ಮ ಕೋಂ ಲೇ: ನಾರಾಯಣಪ್ಪ | ಲಕ್ಷ್ಮೀದೇವಮ್ಮ | 40/1ಬಿ1 ಖಾ.ನಂ. 3037 3038 | ಭೂ ಪರಿವರ್ತನೆ (ನಿವೇಶನ) | 0.02.20 | 0.05 | ರಿ.ಸ.ನಂ.40/1ಬಿ1 ರ ಉಳಿಕೆ | ರಿ.ಸ.ನಂ.40/1ಬಿ1 ರ ಉಳಿಕೆ | ಮಧುಗಿರಿ ರಸ್ತೆ | ರಿ.ಸ.ನಂ.40/1ಬಿ1ರ ಉಳಿಕೆ |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಎಂ. ವೆಂಕಟೇಶಮೂರ್ತಿ**

ಪಿ.ಆರ್.461

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಭೂಸ್ವಾಧೀನ–2 ಮತ್ತು ಪುನರ್ವಸತಿ)

**ಕಂದಾಯ ಸಚಿವಾಲಯ**

**ಭೂ ಸ್ವಾಧೀನ ಅಧಿನಿಯಮ ಕಲಂ 6(1) ಪ್ರಕರಣದ ಮೇರೆಗೆ ಘೋಷಣೆ**

**ಕ್ರಮಾಂಕ:ಕಂಇ/46/ಭೂಸ್ವಾಚ 2010, ದಿನಾಂಕ:26ನೇ ನವೆಂಬರ್, 2010**

ಇದರ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಭೂಮಿಗಳು ಒಂದು ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ಭೀಮಸಮುದ್ರ ಕೆರೆಗೆ ನೀರು ಸಂಗ್ರಹಣೆಗೆ ಪೂರಕ ನಾಲಾ ನಿರ್ಮಾಣ ಉದ್ದೇಶ ಅಗತ್ಯವಾಗಿದ್ದವು ಎಂದು ಚಿತ್ರದುರ್ಗ ಜಿಲ್ಲೆಯ ಜಿಲ್ಲಾಧಿಕಾರಿಗಳವರು ಭೂ ಸ್ವಾಧೀನ ಕಾಯ್ದೆ 1894ರ ಕಲಂ 4(1) ಮೇರೆಗೆ ಅಧಿಸೂಚನೆ ಸಂಖ್ಯೆ: ಎಲ್ಎಕ್ಯೂ:ಎಸ್ಆರ್:59/2009–10 ದಿನಾಂಕ:23.12.2009 ಅಧಿಸೂಚಿಸಲಾಗಿದ್ದರಿಂದ ಮತ್ತು

ಕರ್ನಾಟಕ ಕಾಯ್ದೆ 33/1991ರನ್ವಯ ತಿದ್ದುಪಡಿಯಾದ ಭೂ ಅರ್ಜನೆ ಅಧಿನಿಯಮ 1894ರ ಕೇಂದ್ರ) ಅಧಿನಿಯಮ 1894 (1) 5ಎ ಪ್ರಕರಣದ (2)ನೇ ಉಪ ಪ್ರಕರಣದ ಮತ್ತು 6(1ಎ)ರ ಪ್ರಕರಣದ ಮೇರೆಗೆ ಮೇಲೆ ತಿಳಿಸಿದ ಉದ್ದೇಶಕ್ಕಾಗಿ ಭೂಮಿಗಳು ಅಗತ್ಯವಾಗಿದೆ ಎಂದು ಸದರಿ ಅಧಿನಿಯಮದ ಕಲಂ 6(1)ನೇ ಪ್ರಕರಣದ ಮೇರೆಗೆ ಈ ಮೂಲಕ ಘೋಷಿಸಲಾಗಿದೆ.

ಉಪವಿಭಾಗಾಧಿಕಾರಿಗಳು, ಚಿತ್ರದುರ್ಗ ಉಪವಿಭಾಗ, ಚಿತ್ರದುರ್ಗ ಇವರನ್ನು ಸದರಿ ಭೂಮಿಗಳಿಗೆ ಸಂಬಂಧಿಸಿದಂತೆ ಇನ್ನು ಮುಂದೆ ಕೈಗೊಳ್ಳುವ ಎಲ್ಲಾ ವ್ಯವಹಾರಗಳ ಕುರಿತಂತೆ ಜಿಲ್ಲಾಧಿಕಾರಿಗಳವರ ಪ್ರಕಾರ್ಯಗಳನ್ನು ನಿರ್ವಹಿಸುವ ಸಲುವಾಗಿ ಸದರಿ ಭೂ ಅರ್ಜನೆ ಅಧಿನಿಯಮದ 3ನೇ ಪ್ರಕರಣದ (ಸಿ) ಖಂಡದ ಮೇರೆಗೆ ಈ ಮೂಲಕ ಚಿತ್ರದುರ್ಗ ಉಪವಿಭಾಗಾಧಿಕಾರಿಗಳು ಹಾಗೂ ಭೂ ಸ್ವಾಧೀನಾಧಿಕಾರಿಗಳು ನೇಮಕ ಮಾಡಲಾಗಿದೆ. ಹಾಗೂ ಸದರಿ ಭೂಮಿಯ ಅರ್ಜನೆಗೆ ಸಂಬಂಧಿಸಿದ ಆದೇಶವನ್ನು ಪಡೆದುಕೊಳ್ಳಲು ಸದರಿ ಅಧಿನಿಯಮದ 7ನೇ ಪ್ರಕರಣದ ಮೇರೆಗೆ ನಿರ್ದೇಶನ ನೀಡಲಾಗಿದೆ.

ಸದರಿ ಭೂಮಿಗಳ ನಕಾಶೆಯನ್ನು ಪರಿವೀಕ್ಷಣೆಗಾಗಿ ಉಪವಿಭಾಗಾಧಿಕಾರಿಗಳು ಹಾಗೂ ಭೂ ಸ್ವಾಧೀನಾಧಿಕಾರಿಗಳು ಚಿತ್ರದುರ್ಗ ಉಪವಿಭಾಗ ಚಿತ್ರದುರ್ಗ ಇವರ ಕಾರ್ಯಾಲಯದಲ್ಲಿ ಇಡಲಾಗಿದೆ.

**ಅನುಸೂಚಿ**

**ಜಿಲ್ಲೆ: ಚಿತ್ರದುರ್ಗ ತಾಲ್ಲೂಕು: ಹೊಳಲ್ಕೆರೆ ಹೋಬಳಿ: ತಾಳ್ಯ ಗ್ರಾಮ: ಬಂಜೆಗೊಂಡನಹಳ್ಳಿ**

| ಕ್ರ. ಸಂ. | ಖಾತೆದಾರರ ಹೆಸರು/ ಗೇಣಿದಾರರ ಹೆಸರು, ಹಿತಾಸಕ್ತಿ ಹೊಂದಿರುವ ವ್ಯಕ್ತಿ ಹೆಸರು | ಅನುಭವದಾರರ ಹೆಸರು | ಸರ್ವೆ ನಂ. | ತರಹೆ | ಚಕ್ಕುಬಂದಿ | | | | ಭೂ ಸ್ವಾಧೀನಪಡಿಸಿಕೊಳ್ಳುವ ವಿಸ್ತೀರ್ಣ | | ಆಕಾರ |
|---|---|---|---|---|---|---|---|---|---|---|---|
| | | | | | ಪೂರ್ವ | ಪಶ್ಚಿಮ | ದಕ್ಷಿಣ | ಉತ್ತರ | ದಕ್ಷಿಣ | ಖರಾಬ್ | |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1. | ಡಿ.ಆರ್. ಹೇಮಾಕ್ಷಿ ಕೋಂ ಲೇ: ಹೆಚ್.ಇ. ನಟರಾಜು | ಡಿ.ಆರ್. ಹೇಮಾಕ್ಷಿ ಕೋಂ ಲೇ: ಹೆಚ್.ಇ. ನಟರಾಜು | 101/1ಪಿ1 | ಖುಷ್ಕಿ | ಬಿ.ಜಿ.ಗಡಿ | ರಿ.ಸ.ನಂ.102 | ಉಳಿದ ಜಮೀನು | ಉಳಿದ ಜಮೀನು | 0–10 | 2–25 | 2–04 |

| ಕ್ರ. ಸಂ. | ಖಾತೆದಾರರ ಹೆಸರು/ ಗೇಣಿದಾರರ ಹೆಸರು, ಹಿತಾಸಕ್ತಿ ಹೊಂದಿರುವ ವ್ಯಕ್ತಿ ಹೆಸರು | ಅನುಭವದಾರರ ಹೆಸರು | ಸರ್ವೆ ನಂ. | ತರಹೆ | ಚಕ್ಕುಬಂದಿ | | | | ಭೂ ಸ್ವಾಧೀನಪಡಿಸಿಕೊಳ್ಳುವ ವಿಸ್ತೀರ್ಣ | | ಆಕಾರ |
|---|---|---|---|---|---|---|---|---|---|---|---|
| | | | | | ಪೂರ್ವ | ಪಶ್ಚಿಮ | ದಕ್ಷಿಣ | ಉತ್ತರ | ದಕ್ಷಿಣ | ಖರಾಬ್ | |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 2. | ಹೆಚ್.ಎಸ್. ವಿನಯ್ ಬಿನ್ ಹೆಚ್.ಸಿ.ಶಂಕರ್ | ಹೆಚ್.ಎಸ್. ವಿನಯ್ ಬಿನ್ ಹೆಚ್.ಸಿ. ಶಂಕರ್ | 102/ಪಿ1 | ಖುಷ್ಕಿ | ರಿ.ಸ.ನಂ.101/1 | ರಿ.ಸ.ನಂ.102 | ಉಳಿದ ಜಮೀನು | ಉಳಿದ ಜಮೀನು | – | 4–18 | 4–09 |
| 3. | ಎಸ್. ಮುನಿಯಪ್ಪ ಬಿನ್ ಶರಣಪ್ಪ | ಎಸ್. ಮುನಿಯಪ್ಪ ಬಿನ್ ಶರಣಪ್ಪ | 102/ಪಿ2 | ಖುಷ್ಕಿ | ರಿ.ಸ.ನಂ.102 | ರಿ.ಸ.ನಂ.105 | ರಿ.ಸ.ನಂ.103 | ರಿ.ಸ.ನಂ.102 | – | 1–19 | 1–35 |
| 4. | ಎಂ.ಇ. ವಿಜಯಕುಮಾರ್ ಬಿನ್ ಎಂ.ಬಿ. ಈಶ್ವರಪ್ಪ, ಮಲ್ಲಿಕಾರ್ಜುನ ಬಿನ್ ಈಶ್ವರಪ್ಪ | ಎಂ.ಇ. ವಿಜಯಕುಮಾರ್ ಬಿನ್ ಎಂ.ಬಿ. ಈಶ್ವರಪ್ಪ, ಮಲ್ಲಿಕಾರ್ಜುನ ಬಿನ್ ಈಶ್ವರಪ್ಪ | 102/ಪಿ2 | ಖುಷ್ಕಿ | ರಿ.ಸ.ನಂ.102ಪಿ2 | ರಿ.ಸ.ನಂ.105 | ರಿ.ಸ.ನಂ.102 | ರಿ.ಸ.ನಂ.102 | – | 2–13 | 2–13 |
| 5. | ಗೌಡ್ರ ಬಸಪ್ಪ ಬಿನ್ ಚಿಗಟೇರಪ್ಪ | ಗೌಡ್ರ ಬಸಪ್ಪ ಬಿನ್ ಚಿಗಟೇರಪ್ಪ | 104/1ಎ | ಖುಷ್ಕಿ | ರಿ.ಸ.ನಂ.103 | ರಿ.ಸ.ನಂ.107 | ರಿ.ಸ.ನಂ. 104/1ಬಿ | ರಿ.ಸ.ನಂ.105 | – | 3–38 | 4–50 |
| 6. | ಮಹದೇವಪ್ಪ ಬಿನ್ ನಾರಪ್ಪ | ಮಹದೇವಪ್ಪ ಬಿನ್ ನಾರಪ್ಪ | 104/1ಬಿ | ಖುಷ್ಕಿ | ರಿ.ಸ.ನಂ.103 | ರಿ.ಸ.ನಂ.107 | ರಿ.ಸ.ನಂ. 104/2 | ರಿ.ಸ.ನಂ.105 | 0–03 | 5–14 | 6–09 |
| 7. | ಬಸಪ್ಪ ಬಿನ್ ಮರುಳಪ್ಪ | ಬಸಪ್ಪ ಬಿನ್ ಮರುಳಪ್ಪ | 104/2 | ಖುಷ್ಕಿ | ರಿ.ಸ.ನಂ.104/3 | ರಿ.ಸ.ನಂ.107 | ಪಂಡ್ರಹಳ್ಳಿ ಗಡಿ | ರಿ.ಸ.ನಂ. 104/1ಬಿ | – | 0–18 | 0–51 |
| 8. | ಪಾಪಣ್ಣ ಬಿನ್ ಕಾಟಪ್ಪ | ಪಾಪಣ್ಣ ಬಿನ್ ಕಾಟಪ್ಪ | 105/1ಎಪಿ1–1ಎಪಿ6 | ಖುಷ್ಕಿ | ರಿ.ಸ.ನಂ.102 | ರಿ.ಸ.ನಂ.105/1ಎ1 | ರಿ.ಸ.ನಂ.114 | ರಿ.ಸ.ನಂ.105/1ಎ2 | – | 2–25 | 2–59 |
| 9. | ರಾಜಪ್ಪ ಬಿನ್ ಹಾಲಪ್ಪ | ರಾಜಪ್ಪ ಬಿನ್ ಹಾಲಪ್ಪ | 105/1ಎಪಿ4 | ಖುಷ್ಕಿ | ರಿ.ಸ.ನಂ.102 | ರಿ.ಸ.ನಂ.105/1ಎ1 | ರಿ.ಸ.ನಂ. 105/1ಎ2 | ರಿ.ಸ.ನಂ. 105/1ಎ2 | – | 1–00 | 0–99 |
| 10. | ಎ.ಸಿದ್ದಪ್ಪ ಬಿನ್ ಲೇ: ವರಕೇರಪ್ಪ | ಎ.ಸಿದ್ದಪ್ಪ ಬಿನ್ ಲೇ: ವರಕೇರಪ್ಪ | 107/1ಎ | ಖುಷ್ಕಿ | ರಿ.ಸ.ನಂ.107/1ಬಿ | ರಿ.ಸ.ನಂ.107/2 | ಪಂಡ್ರಹಳ್ಳಿ ಗಡಿ | ರಿ.ಸ.ನಂ.106 | 0–03 | 1–12 | 1–48 |
| 11. | ಶಿವರುದ್ರಪ್ಪ ಬಿನ್ ಬಸಪ್ಪ | ಶಿವರುದ್ರಪ್ಪ ಬಿನ್ ಬಸಪ್ಪ | 107/1ಬಿ | ಖುಷ್ಕಿ | ರಿ.ಸ.ನಂ.107/1ಸಿ | ರಿ.ಸ.ನಂ.107/1ಎ | ಪಂಡ್ರಹಳ್ಳಿ ಗಡಿ | ರಿ.ಸ.ನಂ.106 | 0–03 | 1–04 | 1–25 |

| ಕ್ರ. ಸಂ. | ಖಾತೆದಾರರ ಹೆಸರು/ ಗೇಣಿದಾರರ ಹೆಸರು, ಹಿತಾಸಕ್ತಿ ಹೊಂದಿರುವ ವ್ಯಕ್ತಿ ಹೆಸರು | ಅನುಭವದಾರರ ಹೆಸರು | ಸರ್ವೆ ನಂ. | ತರಹೆ | ಚಕ್ಕುಬಂದಿ | | | | ಭೂ ಸ್ವಾಧೀನಪಡಿಸಿಕೊಳ್ಳುವ ವಿಸ್ತೀರ್ಣ | | ಆಕಾರ |
|---|---|---|---|---|---|---|---|---|---|---|---|
| | | | | | ಪೂರ್ವ | ಪಶ್ಚಿಮ | ದಕ್ಷಿಣ | ಉತ್ತರ | ದಕ್ಷಿಣ | ಖರಾಬ್ | |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 12. | ತಿಪ್ಪಾಚಾರಿ ಬಿನ್ ಭೀಮಾಚಾರಿ ರತ್ನಮ್ಮ ಕೋಂ ತಿಪ್ಪಾಚಾರಿ | ತಿಪ್ಪಾಚಾರಿ ಬಿನ್ ಭೀಮಾಚಾರಿ ರತ್ನಮ್ಮ ಕೋಂ ತಿಪ್ಪಾಚಾರಿ | 107/1ಸಿ | ಖುಷ್ಕಿ | ರಿ.ಸ.ನಂ.104 | ರಿ.ಸ.ನಂ.107/1ಬಿ | ಪಂಡ್ರಹಳ್ಳಿ ಗಡಿ | ರಿ.ಸ.ನಂ.106 | 0–02 | 1–12 | 1–48 |
| 13. | ಎಸ್.ವಿ. ಶಾಂತಕುಮಾರ ಬಿನ್ ವಿರುಪಾಕ್ಷಪ್ಪ | ಎಸ್.ವಿ. ಶಾಂತಕುಮಾರ ಬಿನ್ ವಿರುಪಾಕ್ಷಪ್ಪ | 107/2ಪಿ2 | ಖುಷ್ಕಿ | ರಿ.ಸ.ನಂ.107/ಎ | ರಿ.ಸ.ನಂ.107/2 | ಪಂಡ್ರಹಳ್ಳಿ ಗಡಿ | ರಿ.ಸ.ನಂ.106 | 0–02 | 1–05 | 1–28 |
| 14. | ಈಶ್ವರಪ್ಪ ಬಿನ್ ಹನುಮಪ್ಪ ಜಿ.ಮಹೇಶ್ವರಪ್ಪ ಬಿನ್ ಶಿವಲಿಂಗಪ್ಪ | ಈಶ್ವರಪ್ಪ ಬಿನ್ ಹನುಮಪ್ಪ ಜಿ.ಮಹೇಶ್ವರಪ್ಪ ಬಿನ್ ಶಿವಲಿಂಗಪ್ಪ | 107/2ಪಿ3 | ಖುಷ್ಕಿ | ರಿ.ಸ.ನಂ.107/2 | ರಿ.ಸ.ನಂ.107/2 | ಪಂಡ್ರಹಳ್ಳಿ ಗಡಿ | ರಿ.ಸ.ನಂ.106 | 0–02 | 1–07 | 1–33 |
| 15. | ಎಂ. ರಂಗಪ್ಪ, ನಾಗೇಂದ್ರಪ್ಪ ಎಂ. ಈಶ್ವರಪ್ಪ, ಎಂ.ಲುಂಕಪ್ಪ ಬಿನ್ ಮಹದೇವಪ್ಪ | ಎಂ. ರಂಗಪ್ಪ, ನಾಗೇಂದ್ರಪ್ಪ ಎಂ. ಈಶ್ವರಪ್ಪ, ಎಂ.ಲುಂಕಪ್ಪ ಬಿನ್ ಮಹದೇವಪ್ಪ | 107/2ಪಿ1 | ಖುಷ್ಕಿ | ರಿ.ಸ.ನಂ.107/2 | ರಿ.ಸ.ನಂ.108 | ಪಂಡ್ರಹಳ್ಳಿ ಗಡಿ | ರಿ.ಸ.ನಂ.106 | 0–03 | 1–15 | 1–56 |
| 16. | ಲೋಕೇಶ್ವರಪ್ಪ ಬಿನ್ ಚನ್ನಬಸಪ್ಪ | ಲೋಕೇಶ್ವರಪ್ಪ ಬಿನ್ ಚನ್ನಬಸಪ್ಪ | 108/1 | ಖುಷ್ಕಿ | ರಿ.ಸ.ನಂ.108/3–1 | ರಿ.ಸ.ನಂ.111 | ನುಲೇನೂರು ಗಡಿ | ರಿ.ಸ.ನಂ.109 | 0–02 | 0–22 | 0–62 |
| 17. | ಅಜ್ಜಪ್ಪ ಬಿನ್ ಚನ್ನಬಸಪ್ಪ | ಅಜ್ಜಪ್ಪ ಬಿನ್ ಚನ್ನಬಸಪ್ಪ | 108/1 | ಖುಷ್ಕಿ | ರಿ.ಸ.ನಂ.108/3 | ರಿ.ಸ.ನಂ.108/1 | ನುಲೇನೂರು ಗಡಿ | ರಿ.ಸ.ನಂ.109 | 0–01 | 0–22 | 0–62 |
| 18. | ಎಂ.ರಂಗಪ್ಪ, ನಾಗೇಂದ್ರಪ್ಪ ಎಂ. ಈಶ್ವರಪ್ಪ, ಎಂ.ಲುಂಕಪ್ಪ ಬಿನ್ ಮಹದೇವಪ್ಪ | ಎಂ.ರಂಗಪ್ಪ, ನಾಗೇಂದ್ರಪ್ಪ ಎಂ. ಈಶ್ವರಪ್ಪ, ಎಂ.ಲುಂಕಪ್ಪ ಬಿನ್ ಮಹದೇವಪ್ಪ | 108/2 | ಖುಷ್ಕಿ | ರಿ.ಸ.ನಂ.108/3 | ರಿ.ಸ.ನಂ.108/1 | ನುಲೇನೂರು ಗಡಿ | ರಿ.ಸ.ನಂ.109 | 0–05 | 3–07 | 3–61 |
| 19. | ಎಂ.ಗಂಗಾಧರಪ್ಪ ಬಿನ್ ಮಹದೇವಪ್ಪ | ಎಂ.ಗಂಗಾಧರಪ್ಪ ಬಿನ್ ಮಹದೇವಪ್ಪ | 108/2 | ಖುಷ್ಕಿ | ರಿ.ಸ.ನಂ.107 | ರಿ.ಸ.ನಂ.108/2 | ನುಲೇನೂರು ಗಡಿ | ರಿ.ಸ.ನಂ.109 | 0–04 | 1–03 | 1–22 |

| ಕ್ರ. ಸಂ. | ಖಾತೆದಾರರ ಹೆಸರು/ ಗೇಣಿದಾರರ ಹೆಸರು, ಹಿತಾಸಕ್ತಿ ಹೊಂದಿರುವ ವ್ಯಕ್ತಿ ಹೆಸರು | ಅನುಭವದಾರರ ಹೆಸರು | ಸರ್ವೆ ನಂ. | ತರಹೆ | ಚಕ್ಕುಬಂದಿ | | | | ಭೂ ಸ್ವಾಧೀನಪಡಿಸಿಕೊಳ್ಳುವ ವಿಸ್ತೀರ್ಣ | | ಆಕಾರ |
|---|---|---|---|---|---|---|---|---|---|---|---|
| | | | | | ಪೂರ್ವ | ಪಶ್ಚಿಮ | ದಕ್ಷಿಣ | ಉತ್ತರ | ದಕ್ಷಿಣ | ಖರಾಬ್ | |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 20. | ಬಸವರಾಜಪ್ಪ ಬಿನ್ ಮಾವಿನಳ್ಳಪ್ಪ ಪಾರ್ವತಮ್ಮ ಕೋಂ ಚಂದ್ರಪ್ಪ ಬೈರಮ್ಮ ಕೋಂ ಚಂದ್ರಪ್ಪ | ಬಸವರಾಜಪ್ಪ ಬಿನ್ ಮಾವಿನಳ್ಳಪ್ಪ ಪಾರ್ವತಮ್ಮ ಕೋಂ ಚಂದ್ರಪ್ಪ ಬೈರಮ್ಮ ಕೋಂ ಚಂದ್ರಪ್ಪ | 108/3 | ಖುಷ್ಕಿ | ರಿ.ಸ.ನಂ.108/2 | ರಿ.ಸ.ನಂ.108/1 | ನುಲೇನೂರು ಗಡಿ | ರಿ.ಸ.ನಂ.109 | 0–03 | 2–06 | 2–45 |
| 21. | ದಾಸಮ್ಮ ಕೋಂ ಲೇ.ಭೀಮಪ್ಪ, ಓಂಕಾರಪ್ಪ, ಜಯಪ್ಪ, ಕುಬೇರಪ್ಪ ಬಿನ್ ಲೇ: ಭೀಮಪ್ಪ | ದಾಸಮ್ಮ ಕೋಂ ಲೇ.ಭೀಮಪ್ಪ, ಓಂಕಾರಪ್ಪ, ಜಯಪ್ಪ, ಕುಬೇರಪ್ಪ ಬಿನ್ ಲೇ: ಭೀಮಪ್ಪ | 111/1 111/2 | ಖುಷ್ಕಿ | ರಿ.ಸ.ನಂ. 111/2 | ರಿಸ.ನಂ.111/2 | ನುಲೇನೂರು ಗಡಿ | ರಿ.ಸ.ನಂ.110 | – | 0–31 | 0–76 |
| 22. | ಶಿವನಾಗಪ್ಪ, ರೇವಣ್ಣ, ಮಹಂತೇಶ ಬಿನ್ ತಿಮ್ಮಪ್ಪ | ಶಿವನಾಗಪ್ಪ, ರೇವಣ್ಣ, ಮಹಂತೇಶ ಬಿನ್ ತಿಮ್ಮಪ್ಪ | 111/2 | ಖುಷ್ಕಿ | ರಿ.ಸ.ನಂ.111/2 | ರಿ.ಸ.ನಂ.111/2 | ನುಲೇನೂರು ಗಡಿ | ರಿ.ಸ.ನಂ.110 | – | 0–31 | 0–76 |
| 23. | ಎಂ.ರಂಗಪ್ಪ ಬಿನ್ ಹನುಮಂತಪ್ಪ | ಎಂ.ರಂಗಪ್ಪ ಬಿನ್ ಹನುಮಂತಪ್ಪ | 111/2 111/3 | ಖುಷ್ಕಿ | ರಿ.ಸ.ನಂ.111/3 | ರಿ.ಸ.ನಂ.111/2 | ನುಲೇನೂರು ಗಡಿ | ರಿ.ಸ.ನಂ.110 | – | 0–31 | 0–76 |
| 24. | ಹನುಮಕ್ಕ ಕೇರಾಫ್ ಕಂಬಪ್ಪ ನಿಂಗಪ್ಪ, ಹನುಮಂತಪ್ಪ, ತಿಪ್ಪೇಸ್ವಾಮಿ ಬಿನ್ ಕಂಬಪ್ಪ | ಹನುಮಕ್ಕ ಕೇರಾಫ್ ಕಂಬಪ್ಪ ನಿಂಗಪ್ಪ, ಹನುಮಂತಪ್ಪ, ತಿಪ್ಪೇಸ್ವಾಮಿ ಬಿನ್ ಕಂಬಪ್ಪ | 111/3 | ಖುಷ್ಕಿ | ರಿ.ಸ.ನಂ.111/4 | ರಿ.ಸ.ನಂ.111/3 | ನುಲೇನೂರು ಗಡಿ | ರಿ.ಸ.ನಂ.110 | – | 0–31 | 0–76 |
| 25. | ಗಂಗಮ್ಮ ಕೋಂ ತಿಮ್ಮಪ್ಪ ಬಿ.ಚನ್ನಪ್ಪ ಬಿನ್ ತಿಮ್ಮಪ್ಪ | ಗಂಗಮ್ಮ ಕೋಂ ತಿಮ್ಮಪ್ಪ ಬಿ.ಚನ್ನಪ್ಪ ಬಿನ್ ತಿಮ್ಮಪ್ಪ | 111/4 | ಖುಷ್ಕಿ | ರಿ.ಸ.ನಂ.111/5 | ರಿ.ಸ.ನಂ.111/3 | ನುಲೇನೂರು ಗಡಿ | ರಿ.ಸ.ನಂ.110 | – | 0–26 | 0–64 |
| 26. | ಟಿ. ಜಯಪ್ಪ ಬಿನ್ ತಿಮ್ಮಪ್ಪ | ಟಿ. ಜಯಪ್ಪ ಬಿನ್ ತಿಮ್ಮಪ್ಪ | 111/5 | ಖುಷ್ಕಿ | ರಿ.ಸ.ನಂ.111/6 | ರಿ.ಸ.ನಂ.111/4 | ನುಲೇನೂರು ಗಡಿ | ರಿ.ಸ.ನಂ.110 | – | 0–26 | 0–64 |
| 27. | ಪಿ. ಗಿರಿತಿಮ್ಮಪ್ಪ ಬಿನ್ ತಿಮ್ಮಪ್ಪ | ಪಿ. ಗಿರಿತಿಮ್ಮಪ್ಪ ಬಿನ್ ತಿಮ್ಮಪ್ಪ | 111/6 | ಖುಷ್ಕಿ | ರಿ.ಸ.ನಂ.111/7 | ರಿ.ಸ.ನಂ.111/5 | ನುಲೇನೂರು ಗಡಿ | ರಿ.ಸ.ನಂ.110 | – | 0–26 | 0–64 |
| 28. | ಬಸವಂತಪ್ಪ ಬಿನ್ ತಿಮ್ಮಪ್ಪ | ಬಸವಂತಪ್ಪ ಬಿನ್ ತಿಮ್ಮಪ್ಪ | 111/7 | ಖುಷ್ಕಿ | ರಿ.ಸ.ನಂ.111/8 | ರಿ.ಸ.ನಂ.111/6 | ನುಲೇನೂರು ಗಡಿ | ರಿ.ಸ.ನಂ.110 | – | 0–31 | 0–76 |

| ಕ್ರ. ಸಂ. | ಖಾತೆದಾರರ ಹೆಸರು/ ಗೇಣಿದಾರರ ಹೆಸರು, ಹಿತಾಸಕ್ತಿ ಹೊಂದಿರುವ ವ್ಯಕ್ತಿ ಹೆಸರು | ಅನುಭವದಾರರ ಹೆಸರು | ಸರ್ವೆ ನಂ. | ತರಹೆ | ಚಕ್ಕುಬಂದಿ | | | | ಭೂ ಸ್ವಾಧೀನಪಡಿಸಿಕೊಳ್ಳುವ ವಿಸ್ತೀರ್ಣ | | ಆಕಾರ |
|---|---|---|---|---|---|---|---|---|---|---|---|
| | | | | | ಪೂರ್ವ | ಪಶ್ಚಿಮ | ದಕ್ಷಿಣ | ಉತ್ತರ | ದಕ್ಷಿಣ | ಖರಾಬ್ | |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 29. | ಬಿ. ಜಗದೀಶ್ ಬಿನ್ ಬಿ. ಮುರಿಗೇಂದ್ರಪ್ಪ | ಬಿ. ಜಗದೀಶ್ ಬಿನ್ ಬಿ. ಮುರಿಗೇಂದ್ರಪ್ಪ | 111/8 | ಖುಷ್ಕಿ | ರಿ.ಸ.ನಂ.111/9 | ರಿ.ಸ.ನಂ.111/7 | ನುಲೇನೂರು ಗಡಿ | ರಿ.ಸ.ನಂ.110 | – | 0–31 | 0–76 |
| 30. | ಬಿ.ಎಂ. ವಿಜಯ ಕುಮಾರ್ ಬಿನ್ ಬಿ. ಮುರಿಗೇಂದ್ರಪ್ಪ | ಬಿ.ಎಂ. ವಿಜಯ ಕುಮಾರ್ ಬಿನ್ ಬಿ. ಮುರಿಗೇಂದ್ರಪ್ಪ | 111/9 | ಖುಷ್ಕಿ | ರಿ.ಸ.ನಂ.118 | ರಿ.ಸ.ನಂ.111/8 | ನುಲೇನೂರು ಗಡಿ | ರಿ.ಸ.ನಂ.110 | – | 0–16 | 0–39 |
| 31. | ಬಿ. ಭಾರತಿ ಕೋಂ ಆರ್. ಜಯಣ್ಣ | ಬಿ. ಭಾರತಿ ಕೋಂ ಆರ್. ಜಯಣ್ಣ | 112/1 | ಖುಷ್ಕಿ | ರಿ.ಸ.ನಂ.111 | ರಿ.ಸ.ನಂ.112/2ಎ1 | ನುಲೇನೂರು ಗಡಿ | ರಿ.ಸ.ನಂ.113 | – | 0–32 | 0–96 |
| 32. | ಕರಿಯಪ್ಪ ಬಿನ್ ಶಂಕರಪ್ಪ | ಕರಿಯಪ್ಪ ಬಿನ್ ಶಂಕರಪ್ಪ | 112/2ಎಪಿ1 2ಎಪಿ2 | ಖುಷ್ಕಿ | ರಿ.ಸ.ನಂ.112/1 | ರಸ್ತೆ ರಿ.ಸ.ನಂ.112/2ಎ | ನುಲೇನೂರು ಗಡಿ | ರಿ.ಸ.ನಂ.112/2ಬಿ2 | 0–04 | 2–00 | 2–42 |
| 33. | ಜಿ.ಟಿ. ಪ್ರಭಾಕರ ಬಿನ್ ಜಿ. ತಿಪ್ಪೇರುದ್ರಪ್ಪ | ಜಿ.ಟಿ. ಪ್ರಭಾಕರ ಬಿನ್ ಜಿ. ತಿಪ್ಪೇರುದ್ರಪ್ಪ | 112/2ಎಪಿ2 | ಖುಷ್ಕಿ | ರಿ.ಸ.ನಂ.112/2ಎ | ರಸ್ತೆ | ರಿ.ಸ.ನಂ.112/2ಎ | ರಿ.ಸ.ನಂ. 112/2ಬಿ2 | 0–04 | 2–08 | 2–66 |
| 34. | ರತ್ನಮ್ಮ ಕೋಂ ಜಿ. ನಾಗಲಿಂಗಪ್ಪ | ರತ್ನಮ್ಮ ಕೋಂ ಜಿ. ನಾಗಲಿಂಗಪ್ಪ | 112/2ಬಿ1 | ಖುಷ್ಕಿ | ರಿ.ಸ.ನಂ.112/1 | ರಸ್ತೆ | ರಿ.ಸ.ನಂ. 112/2ಬಿ2 | ರಿ.ಸ.ನಂ.113 | 0–02 | 0–24 | 0–72 |
| 35. | ಬಿ. ಭಾರತಿ ಕೋಂ ಆರ್. ಜಯಣ್ಣ, ಶಿವನಾಗಪ್ಪ ಬಿನ್ ತಿಮ್ಮಪ್ಪ, ರೇವಣ್ಣ, ಜಂಟಿ ಮಹಂತೇಶಪ್ಪ, ಹನುಮಕ್ಕ ನಿಂಗಪ್ಪ ಹನುಮಂತಪ್ಪ, ತಿಪ್ಪೇಸ್ವಾಮಿ ಬಿನ್ ಕೋಂ ಕಂಬಪ್ಪ, ದಾಸಮ್ಮ ಕೇರಾಫ್ ಲೇ. ಭೀಮಪ್ಪ | ಬಿ. ಭಾರತಿ ಕೋಂ ಆರ್. ಜಯಣ್ಣ, ಶಿವನಾಗಪ್ಪ ಬಿನ್ ತಿಮ್ಮಪ್ಪ, ರೇವಣ್ಣ, ಜಂಟಿ ಮಹಂತೇಶಪ್ಪ, ಹನುಮಕ್ಕ ನಿಂಗಪ್ಪ ಹನುಮಂತಪ್ಪ, ತಿಪ್ಪೇಸ್ವಾಮಿ ಬಿನ್ ಕೋಂ ಕಂಬಪ್ಪ, ದಾಸಮ್ಮ ಕೇರಾಫ್ ಲೇ. ಭೀಮಪ್ಪ | 112/2ಬಿ2 | ಖುಷ್ಕಿ | ರಿ.ಸ.ನಂ.112/1 | ರಸ್ತೆ | ರಿ.ಸ.ನಂ.112/2ಎ | ರಿ.ಸ.ನಂ.112/2ಎ | 0–04 | 0–26 | 0–78 |
| | | | | | | | **ಜುಮ್ಲಾ** | | | **52–15** | |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಎಂ. ವೆಂಕಟೇಶಮೂರ್ತಿ**

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಭೂಸ್ವಾಧೀನ–2 ಮತ್ತು ಪುನರ್ವಸತಿ)

ಪಿ.ಆರ್.451